ಅವರು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆಂದು ಇವರು ಹೇಳತಕ್ಕಂಥದ್ದು ನಡೆಯುತ್ತಿದೆ. There I have a point.

ಅಧ್ಯಕ್ಷರು : ನೈಸ್ ಕಂಪನಿಯವರು ಜಾಸ್ತಿ ಒತ್ತುವರಿ ಮಾಡಿರತಕ್ಕಂಥದರ ಬಗ್ಗೆ ತನಿಖೆ ಮಾಡಲು ಒಂದು ಕಮಿಟಿ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು.

ಅಧ್ಯಕ್ಷರು : ಮತ್ತೆ ಅವರು ಒತ್ತುವರಿ ಮಾಡಿದ್ದಾರೆ ಮತ್ತು ಇವರು ಒತ್ತುವರಿ ಮಾಡಿದ್ದಾರೆಂದು ತಾವು ಹೇಳಿದ್ದೀರಿ. ಆದ್ದರಿಂದ ಯಾರು ಒತ್ತುವರಿ ಮಾಡಿದ್ದಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ದೇವೇಗೌಡರು ಒತ್ತುವರಿ ಮಾಡಿದ್ದಾರೆಂದು ಇವರು ಹೇಳುತ್ತಿದ್ದಾರೆ. ಮತ್ತೊಬ್ಬರು with due respects ಮಾನ್ಯ ಅಶೋಕ್‌ರವರ ಹೆಸರೂ ಕೂಡ ಪ್ರಸ್ತಾಪ ಮಾಡಿದರು.

MR. SPEAKER : It is all appeared in papers. ಅವರು ಹೇಳಿದರು ಇವರು ಹೇಳಿದರು ಎನ್ನತಕ್ಕಂಥದ್ದು ಬೇಡ. ಯಾರ್ಯಾರು ಒತ್ತುವರಿ ಮಾಡಿದ್ದಾರೆ ಎನ್ನತಕ್ಕಂಥ ದಾಖಲೆಗಳು ಏನಾದರು ನಿಮ್ಮ ಹತ್ತಿರ ಇವೆಯೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ನನಗೆ ಅವಕಾಶ ಕೊಟ್ಟರೆ ನಾನು ಎಲ್ಲವನ್ನೂ ಹೇಳುತ್ತೇನೆ.

ಅಧ್ಯಕ್ಷರು : ಯಾರಾದರೂ ಬೇರೆ ಬೇರೆಯವರು ಒತ್ತುವರಿ ಮಾಡಿದ್ದರೆ ಅಂಥ ವಿಷಯಗಳನ್ನು ಇಲ್ಲಿ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಸಿದ್ಧನಿದ್ದೇನೆ. ಮೊದಲು ನಿಮಗೆ ಕನ್‌ವಿನ್ಸ್ ಮಾಡುತ್ತಿದ್ದೇನೆ. ಚರ್ಚೆ ಮುಂದುವರಿಸಿ ಎಂದರೆ ನನ್ನದೇನೂ ತಕರಾರು ಇಲ್ಲ. ನಾನು ತಂದಿರತಕ್ಕಂಥ ನಿಲುವಳಿ ಸೂಚನೆಗೆ ತಾವು ಅಲೌ ಮಾಡಬೇಕು. ಇದರ ಬಗ್ಗೆ ಬಹಳಷ್ಟು ವಿಷಯಗಳು ಚರ್ಚೆಯಾಗಬೇಕಾಗಿದೆ. ಮತ್ತು ಇದು ಬಹಳ ಗಹನವಾದ ವಿಚಾರವಾಗಿದೆ. ಆದ್ದರಿಂದ ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಮತ್ತೆ ಇದನ್ನು ಏತಕ್ಕಾಗಿ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇನೆಂದರೆ, ಮಾನ್ಯ ಮಾಧುಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ಸುತ್ತಮುತ್ತ ಆಗಿರತಕ್ಕಂಥ ಒತ್ತುವರಿ ಬಗ್ಗೆ

ಹೇಳಿದ್ದಾರೆ. ಮತ್ತೆ ಕಂದಾಯ ಮಂತ್ರಿಗಳು ಒಂದುಸಾರಿ ಉತ್ತರ ಕೊಡುವಂಥ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಚಿಲ್ಲರೆ ಎಕರೆ ಒತ್ತುವರಿಯಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆ ಸ್ಪಷ್ಟವಾದ ದಾಖಲೆಗಳು ನಿಮ್ಮ ಹತ್ತಿರ ಇದ್ದಲ್ಲಿ ಚರ್ಚೆಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಹಾಗೆಯೇ, ಇದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೇನೆ. ಆನಂತರ, ಇದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಈಗಲೇ ಪ್ರಸ್ತಾಪ ಮಾಡಲೇ ಅಥವಾ ಆನಂತರ ಪ್ರಸ್ತಾಪ ಮಾಡಲೆ?

ಅಧ್ಯಕ್ಷರು : ತಾವು ಆನಂತರ ಈ ವಿಷಯವನ್ನು ಪ್ರಸ್ತಾಪ ಮಾಡಿ. ಈ ವಿಷಯವನ್ನು ಆನಂತರ ತೆಗೆದುಕೊಳ್ಳುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) **ವಿಷಯ** : ಆಂಧ್ರಪ್ರದೇಶ ಕೃಷ್ಣಾ ಬೇಸಿನ್‌ನಲ್ಲಿ ಕಾನೂನು ಬಾಹಿರವಾಗಿ ಯೋಜನೆಗಳನ್ನು ತೆಗೆದುಕೊಂಡಿರುವ ಬಗ್ಗೆ .

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ನೆಲ ಜಲದ ಪ್ರಶ್ನೆಯಾಗಿದೆ. ನಿನ್ನೆ ದಿವಸ ಅರ್ಧಕ್ಕೆ ಚರ್ಚೆಯನ್ನು ನಿಲ್ಲಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಮ್ಮತದ ನಿರ್ಣಯವಾಗಬೇಕೆಂದು ನಾವು ಹೇಳಿದ್ದೇವೆ. ಆದರೆ, ಸರ್ಕಾರ ಈಗ ಮೌನವಾಗಿ ಕುಳಿತರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಿಯಮ 69 ರ ಅಡಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ನಾನು ಅನಂತರ ಸಮಯ ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ ಮೇಲೂ ಕೂಡ ತಾವೇಕೆ ಈಗ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳತಕ್ಕಂಥ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಕೃಷ್ಣಾ ಗೋದಾವರಿ ನೀರಿನ ವಿಷಯದ ಬಗ್ಗೆ ಕೇಳುತ್ತಿದ್ದೇನೆ. ಇವತ್ತಿನದಿವಸ ಆಂಧ್ರಪ್ರದೇಶದ ಸರ್ಕಾರ ಅನಧಿಕೃತವಾಗಿ 4480 ಕೋಟಿ ರೂಪಾಯಿಗಳ ಅಂದಾಜಿನ ಕಾಮಗಾರಿಯನ್ನು ಪ್ರಾರಂಭ ಮಾಡಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಫ್ಲೋರ್ ಲೀಡರ್ಸ್ ಜೊತೆಗೆ ಮಾನ್ಯ ಸ್ಪೀಕರ್‌ರವರ ಕೊಠಡಿಯಲ್ಲಿ ಸಭೆ